'ಮೀನುಪೇಟೆಯ ತಿರುವು' ಕವನ ಸಂಕಲನದ ಮೂಲಕ ಸಹೃದಯರ ಗಮನಸೆಳೆದಿರುವ ರೇಣುಕಾ ರಮಾನಂದ ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ವಂದಿಗೆ ಗ್ರಾಮದವರು. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾವ್ಯವೇ ಪ್ರಧಾನ ಅಭಿವ್ಯಕ್ತಿಯಾದರೂ, ರೇಣುಕಾ ಕಥೆಗಾರ್ತಿಯಾಗಿಯೂ ಉತ್ತಮ ಕಥೆಗಳನ್ನು ಕಟ್ಟಿದವರು ಹಾಗೂ ಕಥೆಗಳಿಗೆ ಬಹುಮಾನಗಳನ್ನು ಪಡೆದವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ, ಸಂಗಂ ಕಾವ್ಯ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳಿಗೆ ರೇಣುಕಾ ಭಾಜನರು.

ಏನೋ ಸೂಕ್ಷ್ಮ ಬಡಿದಿದೆ. ಹಾಗಾಗಿಯೇ ಅವಳು ತನ್ನ ಜೀವನದ ಕಥೆಯ ಜೊತೆ ಅದರಲ್ಲಿ ನನಗೂ ಕೆಲವೊಂದು ಪಾಠಗಳನ್ನು ಹೇಳಿದ್ದಾಳೆ... 'ಜೀವನ ಮಟ್ಟದಲ್ಲಿ ನೀವು ಕೊಂಚ ಮೇಲಸ್ತರದವರು, ನಾನು ಕೊಂಚ ಕೆಳಸ್ತರದವಳು ಇರಬಹುದು... ಆದರೆ ಇಬ್ಬರು ಹೆಣ್ಣುಜೀವಗಳಾಗಿ ದಣಪೆಯಂಚಿನ ಗಿಡದ ಒಂದೇ ತೊಟ್ಟಿಗೆ ಎರಡಾಗುವ ಜೋಡಿ ನಂದಿಬಟ್ಟಲ ಹೂವುಗಳಂತೆ ನಾವಿಬ್ಬರೂ' ಎಂಬ ಸೂಕ್ಷ್ಮ ಅವಳ ಮಾತಿನಲ್ಲಿತ್ತು... ನಾವು ಹೆಣ್ಣುಗಳು ನಮ್ಮ ಕರ್ತವ್ಯ ನಿಭಾಯಿಸುವುದರ ಜೊತೆ ನಮ್ಮ ಜೋಪಾನಕ್ಕೂ ಮಹತ್ವ ಕೊಡಬೇಕು ಎಂಬುದನ್ನು ಎಷ್ಟು ಚಂದ ಹೇಳಿದಳು... ಹೌದು ಬಸವಣ್ಣಿಗೆ ಎಲ್ಲವೂ ಗೊತ್ತಿದೆ. ಜೀವನಾನುಭವ ಜಾಸ್ತಿ. ಅವಳ ಮಾತಿನ ಪ್ರತಿಯೊಂದು ಪದದೊಳಗಿನ ಸೂಕ್ಷ್ಮತೆ ತನ್ನ ಒಳಹೊರಗು ಈಗ ಓಡಾಡುತ್ತಿದೆ ಎಂಬುದನ್ನು ಅರಿಯುತ್ತ ಅನಘಾ, ಎದ್ದು ಸ್ವಲ್ಪ ಗಂಜಿಯಾದರೂ ಮಾಡಿಕೊಳ್ಳೋಣ, ನಾಲಿಗೆಯೆಲ್ಲ ಔಷಧದಿಂದಾಗಿ ಜಡ್ಡಾಗಿದೆ ಎನ್ನುತ್ತ ಒಳಬಂದಳು...

* * *

ಅನಘಾಳ ಗಂಡ ಸಂದೀಪ. ಒಂದು ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾನೆ. ತಿಂಗಳಿಗೆ ಅವನಿಗೆ ಇಪ್ಪತ್ತಾರು ಸಾವಿರ ಸಂಬಳ ಸಿಕ್ಕಿದರೆ ಖಾಸಗಿ ಸ್ಕೂಲೊಂದರಲ್ಲಿ ಶಿಕ್ಷಕಿಯಾಗಿರುವ ಅನಘಾಳಿಗೆ ಇಪ್ಪತ್ತಮೂರು ಸಾವಿರ ಸಿಗುತ್ತದೆ. ಮಗ ಚಾತುರ್ಯ ಒಬ್ಬನೇ, ಆರನೇ ತರಗತಿಯಲ್ಲಿದ್ದಾನೆ. ಮಾವ ಇಲ್ಲ. ಅತ್ತೆ ಇದ್ದಾರೆ. ಈಗೊಂದು ತಿಂಗಳಿಂದ ಮಗಳ ಮನೆಗೆ ಹೋಗಿದ್ದಾರೆ. ಆದರೆ ಸಂದೀಪನ ತಂದೆಯ ತಾಯಿ ಇನ್ನೂ ಬದುಕಿದ್ದಾರೆ. ತೊಂಬತ್ತೊಂದರ ಅವರು ಸ್ನಾನ ಶೌಚ ಮಾಡಿಕೊಳ್ಳುವಷ್ಟು ಗಟ್ಟಿ ಇದಾರೆ. ಆದರೆ ವೈದ್ಯರು 'ಹೆಚ್ಚು ತಿರುಗಾಡಲು ಕೊಡಬೇಡಿ. ಕೈ ಕಾಲು ಮುರಿದರೆ ಈ ವಯಸ್ಸಿಗೆ ಕಷ್ಟ' ಎಂದ ಕಾರಣ, ಊಟ ತಿಂಡಿ ನೀರು ಎಲ್ಲ ಕುಳಿತಲ್ಲೇ ಒಯ್ದು ಕೊಡಬೇಕು... ಮತ್ತೆ ಖಾಲಿ ಬಟ್ಟಲು ತರಬೇಕು... ಇವೆಲ್ಲ ಕೆಲಸ ಅನಘಾಳ ಹೆಗಲಿಗೆ.

ಸಂಜೆ ಆರರ ನಂತರ ಮನೆಗೆ ಬರುವ ತಮ್ಮಿಬ್ಬರಲ್ಲಿ ಸಂದೀಪ ನೇರ ಬಾತ್‌ರೂಮು ಹೊಕ್ಕು ಮಿಂದು ತಾನು ಮಾಡಿಕೊಟ್ಟ ಟೀ ಕುಡಿದು, ಆರಾಮ್ ಟೀವಿಯ ಮುಂದೆ ರಾತ್ರಿ ಎಂಟರವರೆಗೂ ಚಾನಲ್ ಬದಲಿಸುತ್ತ ಕೂತಿರುತ್ತಾನೆ. ಈ ಮಧ್ಯೆ ಗೆಳೆಯರು ಬಂದು ಗೇಟ್ ಹತ್ತಿರ ಗಾಡಿ ಹಾರ್ನ್ ಹಾಕಿದರೆ ಹರಟೆ ಕೊಚ್ಚಲು ಬಂಡಿಕಟ್ಟೆ ಹತ್ರ ಹೋಗುವುದೂ ಇದೆ... ಆದರೆ ತಾನು? ಅಜ್ಜಿಯ ಆರೈಕೆ, ಮಗನಿಗೆ ಸಂಜೆ ತಿಂಡಿ, ಚಹಾ, ಅನ್ನ, ಸಾರು, ಪಲ್ಯ, ರೊಟ್ಟಿ, ಮರುದಿನದ ದೋಸೆಗೆ ರುಬ್ಬಿಡೋದು, ಅಡ್ಡಂಟಿನ ಪಾತ್ರೆ, ಟಿಫಿನ್ ಬಾಕ್ಸ್ ತೊಳೆದಿಡೋದು, ಮಗನ ಹೋಂ ವರ್ಕ್, ಅವನ ಬಟ್ಟೆ ಇಸ್ತ್ರಿ... ಹೀಗೆ ಒಂದೇ ಎರಡೇ... ಸತ್ತು ಮಣ್ಣಾಗಿ ಹೋಗುತ್ತೇನೆ. ರಾತ್ರಿ ಊಟವಾಗಿ ಮಲಗುವವರೆಗೂ ಮಾಡಿದಷ್ಟು ಕೆಲಸ ಕಾಣುತ್ತಲೇ ಇರುತ್ತದೆ... ಬೆಳಗಾದರೆ ಮತ್ತೆ ಹಂಡೆ ಒಲೆಗೆ ನೀರು ಹಾಕಬೇಕು, ಅಜ್ಜಿಯನ್ನು ಸ್ನಾನ ಶೌಚಕ್ಕೆ ಒಯ್ಯಬೇಕು, ತಿಂಡಿ ಅಡುಗೆ, ಮತ್ತೆ ಟಿಫಿನ್ ತುಂಬುವುದು... ಕಾಲಿಗೆ ಚಕ್ರ ಕಟ್ಟಿ ಸರಭರ ಓಡಿಯಾಡುತ್ತಿದ್ದರೂ ಸಂದೀಪನ ವಾರೆಗಣ್ಣೂ ತನ್ನೆಡೆಗೆ ಬೀಳುವುದಿಲ್ಲ. 'ನೀನು ಹೆಂಗಸು. ಇದೆಲ್ಲ ಮಾಡಬೇಕಿರೋದು ನೀನು ಮಾತ್ರ' ಎನ್ನುವ ಮನೋಭಾವ ಮೊದಲಿನಿಂದಲೂ... ಹೆಸರಿಗೆ ಟೀಚರ್ ನೌಕರಿ ನನ್ನದು, ಮದುವೆಯಾಗಿ ಹದಿನಾಲ್ಕು ವರ್ಷದಲ್ಲಿ ತನ್ನ ಪಾಸಬುಕ್ ಚೆಕ್‌ಬುಕ್ ತೆಗೆದುಕೊಂಡು ಒಮ್ಮೆ ಕೂಡ ಬ್ಯಾಂಕಿಗೆ ತಾನು ಹೋಗಿ ಹಣ ಡ್ರಾ